ಎಷ್ಟೋ ವರ್ಷಗಳ ನಂತರ ಸಿಕ್ಕರೂ, ಹಲವು ವರ್ಷಗಳಿಂದ ಜೊತೆಯಲ್ಲೇ ಇದ್ದೇವೆ ಎನ್ನುವ ಸಲುಗೆಯಿಂದ ಆತ ನನ್ನೊಡನೆ ವರ್ತಿಸುತ್ತಿರುವ ರೀತಿ ನನಗೆ ಅಚ್ಚರಿಯೊಡನೆ ಮುಜುಗರವನ್ನೂ ಉಂಟುಮಾಡಿತು. ಹೀಗೇ ಕೆಲ ಸಮಯ ಪ್ರದರ್ಶನ ಮಳಿಗೆಯಲ್ಲೇ ಸುತ್ತಾಡಿ ಕಳೆದು, ವಿಳಾಸ ಫೋನ್ ನಂಬರು, ಮುಂಬಯಿಯಲ್ಲಿ ನಾವುಳಿದುಕೊಂಡ ಹೋಟೆಲಿನ ಮಾಹಿತಿ ಇತ್ಯಾದಿಗಳನ್ನು ವಿನಿಮಯ ಮಾಡಿಕೊಂಡು ನಾವಿಬ್ಬರೂ ಪರಸ್ಪರ ಬೀಳ್ಕೊಟ್ಟೆವು. ಮೊದಲ ಭೇಟಿಯಲ್ಲಿಯೇ ನನ್ನನ್ನು ಸಂಪೂರ್ಣವಾಗಿ ಇಂಪ್ರೆಸ್ ಮಾಡಿದ್ದ ಮೋ. ಆತ ಅತ್ತ ಹೋಗುತ್ತಲೇ ಯಾಕೋ ಒಂದಡಿ ಕುಗ್ಗಿದ್ದೇನೆನಿಸಿತು. ನನ್ನದೇ ವಯಸ್ಸಿನ ಅವನೆಲ್ಲಿ, ನಾನೆಲ್ಲಿ!

ಸುಮಾರು ರಾತ್ರಿ ಎಂಟು ಗಂಟೆಗೆ ಹೋಟೆಲ್ ರೂಮಿನಲ್ಲಿ ನಾನು ವಿಶ್ರಮಿಸುತ್ತಿದ್ದಾಗ ಕರೆಗಂಟೆಯ ಸದ್ದಿಗೆ ಎದ್ದು ಹೋಗಿ ಬಾಗಿಲು ತೆಗೆದರೆ, ಮೋಹನ! 'ವದ್ದಾss...' ಎಂದು ಉಚ್ಚರಿಸುತ್ತಾ ನನ್ನನ್ನು ಬರಸೆಳೆದು ಗಟ್ಟಿಯಾಗಿ ಅಪ್ಪಿಕೊಂಡ. ಕೊಸರಿಕೊಳ್ಳುತ್ತಲೇ, ಈತನನ್ನು ಮತ್ತೊಮ್ಮೆ ಭೇಟಿಯಾಗುವ ಯಾವುದೇ ಸಾಧ್ಯತೆಗಳನ್ನು ನಿರೀಕ್ಷಿಸಿರದ ನನಗೆ ನಿಜಕ್ಕೂ ಇದು ಆಶ್ಚರ್ಯವೆನಿಸಿತು. 'ನಡಿ, ಡಿನ್ನರಿಗೆ ಹೊರಗೆಲ್ಲಾದರೂ ಹೋಗೋಣ' ಎಂದ. ನನ್ನದೂ ಊಟವಾಗಿರಲಿಲ್ಲ, ಒಪ್ಪಿದೆ. 'ಗ್ರೇಟ್, ಐ ವಿಲ್ ಟೇಕ್ ಯು ಟು ಅ ವೆರಿ ಇಂಟರೆಸ್ಟಿಂಗ್ ಪ್ಲೇಸ್' ಎನ್ನುತ್ತಾ ಹೊರಟ. ಆತ ಬಾಡಿಗೆಗೆ ತಂದಿದ್ದ ಐಷಾರಾಮಿ ಕಾರನ್ನು ನೋಡಿಯೇ 'ಬಡ್ಡಿಮಗ ಸರೀ ದುಡ್ಡು ಮಾಡಿದ್ದಾನೆ' ಎಂಬುದು ಖಾತ್ರಿಯಾಗಿತ್ತು ನನಗೆ. ಕಾರು ಯಾವುದೋ ಫೈವ್‌ಸ್ಟಾರ್ ಹೋಟೆಲಿನ ಎದುರು ಹೋಗಿ ನಿಂತಿತು. ನಾನು ಬರೀ ಚಪ್ಪಲಿಯಲಿ ಬಂದದ್ದು ತಕ್ಷಣ ನನ್ನ ಗಮನಕ್ಕೆ ಬಂದು ಸಣ್ಣ ಆಘಾತವೇ ಆಯಿತು. ಇಲ್ಲಿಗೆ ಕರೆತರುತ್ತಾನೆಂದು ಮೊದಲೇ ಗೊತ್ತಿದ್ದರೆ ಬೂಟನ್ನಾದರೂ ಹಾಕಿಬರಬಹುದಿತ್ತು ಅಂದುಕೊಂಡೆ. ಒಳಗಡೆ ಕಾಲಿಡುತ್ತಿರುವಂತೆ ಫಳ ಫಳ ಹೊಳೆಯುವ ಮಾರ್ಬಲ್ ಫ್ಲೋರಿಂಗು, ಬಣ್ಣದ ಕುಸುರಿಯ ಗಾಜಿನ ಗೋಡೆಗಳು, ದೊಡ್ಡ ದೊಡ್ಡ ತೂರಾಡುವ ಲೈಟುಗಳು... ಇಲ್ಲೇ ಅಂತ ಅಲ್ಲ; ಇಂತಹುದೇ ಐಷಾರಾಮಿ ಆಫೀಸುಗಳು, ರೆಸ್ಟೋರೆಂಟುಗಳು, ಶಾಪಿಂಗ್ ಮಾಲುಗಳು ಯಾವುದೇ ಆದರೂ ನನಗೇನೋ ಒಂಥರಾ ಫೀಲಿಂಗು. ಒಳ ಹೊಕ್ಕೊಡನೇ ನನ್ನ ಅಂಗಿಯ ಫಿಟ್ಟಿಂಗ್ ಸರಿಯಿಲ್ಲವೇನೋ, ನಾನು ತೊಟ್ಟಿರುವ ವಾಚು ಮೆಜೆಸ್ಟಿಕ್ಕಿನ ಬರ್ಮಾ ಬಜಾರಿನಲ್ಲಿ ಕೊಂಡದ್ದು ಅಂತಾ ಯಾರಿಗಾದರೂ ಗೊತ್ತಾಗಿಬಿಡುತ್ತದೇನೋ ಎಂದೆಲ್ಲಾ ಅನ್ನಿಸಲು ಶುರುವಾಗಿ ಬಿಡುತ್ತದೆ. ಮೋಹನ ಮಾತ್ರ ಇದು ತನ್ನದೇ ಮನೆ ಎನ್ನುವಷ್ಟು ಸಲೀಸಾಗಿ ಮುನ್ನಡೆದ. ರಿಸೆಪ್ಷನ್ನಿನ ಚೆಂದದ ಹುಡುಗಿ ನಮ್ಮನ್ನು ಆದರದಿಂದ ಬರಮಾಡಿಕೊಂಡಳು. 'ಯು ಆರ್ ಲುಕಿಂಗ್ ಗಾರ್ಜಿಯಸ್' ಎಂದ ಮೋಹನ ಅವಳಿಗೆ. ಆಕೆ ನಾಚುತ್ತ ಧನ್ಯವಾದ ಹೇಳಿದಳು. ನಂತರ ಲಿಫ್ಟಿನಲ್ಲಿ, 'ಆಕೆ ನಿನಗೆ ಗೊತ್ತಾ?' ಎಂದು ಕುತೂಹಲದಿಂದ ನಾನು ಕೇಳಿದ್ದಕ್ಕೆ 'ಇಲ್ಲಾ, ಇದೇ ಮೊದಲು ನೋಡಿದ್ದು. ಸಖತ್ ಆಗಿದಾಳಲ್ವಾ?' ಎಂದ.

ಲಿಫ್ಟು ಜುರ್ರನೆ ಅದೆಷ್ಟನೆಯದೋ ಫ್ಲೋರಿನ ರೆಸ್ಟೋರೆಂಟ್ ಒಂದಕ್ಕೆ ಹೋಗಿ ನಿಂತಿತು. ಆ ರೆಸ್ಟೋರೆಂಟಿನ ಸ್ವಾಗತಕಾರ ಇವನತ್ತ ಪರಿಚಯದ ನಗೆ ಬೀರಿದ. ಇಬ್ಬರೂ ಏನೇನೋ ಮಾತಾಡಿಕೊಂಡ ನಂತರ ನನ್ನ ಪರಿಚಯವನ್ನೂ ಆತನಿಗೆ ಮಾಡಿಸಿಕೊಟ್ಟ. ಫೈವ್‌ಸ್ಟಾರ್ ಹೋಟೆಲಿನ ರೆಸ್ಟಾರೆಂಟ್ ಅಂದಮೇಲೆ ಕೇಳಬೇಕೆ? ಅದರ ಖದರೇ ಬೇರೆ. ಮೆತ್ತನೆಯ ಬಿಳಿಯ ಸೋಫಾದ ಮೇಲೆ ಇಬ್ಬರೂ ಆಸೀನರಾಗುತ್ತಿರುವಂತೆಯೇ 'ಏನು ತೆಗೆದುಕೊಳ್ಳುತ್ತೀಯಾ...